ಸಾಕ್ಷಿಯನ್ನು ದಿನಾಂಕ 31-08-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ** ಪಾಟೀ ಸವಾಲುಃ **ಪ್ರತಿವಾದಿ** ಪರ **ಶ್ರೀ.ಎಂ ಎಸ್ ಬಿ** ವಕೀಲರಿಂದಃ

ನಿಪಿ.76 ಮತ್ತು 77 ಆರ್ ಟಿ ಸಿ ಗಳಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ದಿಂದ ಸಾಲ ಪಡೆದ ಬಗ್ಗೆ ಕಾಲಂ ನಂ.11 ರಲ್ಲಿ ನಮೂದು ಇದೆ ಎಂದರೆ ಮೋಸದಿಂದ ಆ ರೀತಿ ಎಂಟ್ರಿ ಹಾಕಿಸಿದ್ದಾರೆ ಎಂದು ನುಡಿಯುತ್ತೇನೆ. ಅವು ಕುಟುಂದಬ ಆಸ್ತಿಗಳೆಂದು ನಾನು ಪ್ರತಿಪಾದಿಸಿದ್ದೇನೆ ಎಂದರೆ ನಿಜ. ಆ ಸಾಲದ ಬಗ್ಗೆ ದಾವೆಯಲ್ಲಿ ನಾನು ಹೇಳಿಲ್ಲ ಎಂದರೆ ಮೋಸ ಮಾಡಿ ಅವರ ಹೆಸರಿಗೆ ಆರ್ ಟಿ ಸಿ ಮಾಡಿಕೊಂಡಿದ್ದಾರೆ ಹಾಗೂ ಆ ರೀತಿ ಮೋಸದಿಂದ ಸಾಲ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತೇನೆ. ಈಗ ತೋರಿಸುತ್ತಿರುವ ನಿಪಿ.22 ರಿಂದ 26 ರಲ್ಲಿ ಯು ಟಿ ಐ ಬ್ಯಾಂಕ್ ದೇಶಪಾಂಡೆ ನಗರ ಶಾಖೆ, ಹುಬ್ಬಳ್ಳಿದಿಂದ ಸಾಲ ಪಡೆದ ಬಗ್ಗೆ ನಮೂದು ಇದೆ ಎಂದರೆ ಆ ರೀತಿ ಸಾಲ ಪಡೆದುಕೊಳ್ಳುವ ಅವಶ್ಯಕತೆಯೇ ಇರಲಿಲ್ಲ ಎಂದು ಮಾತ್ರ ನುಡಿಯುತ್ತೇನೆ. ಆ ರೀತಿ ಸಾಲ ಪಡೆದುಕೊಳ್ಳಲು ಅವಶ್ಯಕತೆ ಇರಲ್ಲಿಲ ಎಂದು ಹೇಳಬೇಕಾದರೆ ಅಷ್ಟು ಶ್ರೀಮಂತ ಮನೆತನವೇ ಎಂದು ಕೇಳಿದರೆ ಉತ್ಪನ್ನ ಸಾಕಷ್ಟು ಇದೆ ಎಂದು ನುಡಿಯುತ್ತೇನೆ. ಎಷ್ಟು ಉತ್ಪನ್ನ ಸದರಿ ಆಸ್ತಿಗಳಿಂದ ಇದೆ ಎಂದು ನನ್ನ ದಾವೆಯಲ್ಲಿ ಅಥವಾ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿಬರೆಸಿದ್ದೇನೆಯೇ ಎಂದರೆ ಉತ್ಪನ್ನ ಸಾಕಷ್ಟು ಇದೆ ಎಂದು ಮಾತ್ರ ನುಡಿಯುತ್ತೇನೆ. ಆ ರೀತಿ ಕೇವಲ ಬಾಯಿ ಮಾತಿನ ಹೇಳಿಕೆ ಹೇಳುತ್ತಿರುವುದು ಹೊರತು ಅದು ನಿಜವಲ್ಲ ಎಂದರೆ ಸರಿಯಲ್ಲ. ಆ ರೀತಿ ಉತ್ಪನ್ನ ಇದೆ ಎಂದು ತೋರಿಸುವಂತಹ ಯಾವ ದಾಖಲೆ ಹಾಜರಪಡಿಸಿದ್ದೇನೆ ಎಂದು ಕೇಳಿದರೆ 2 ವರ್ಷಕ್ಕೊಮ್ಮೆ 3 ವರ್ಷಕ್ಕೊಮ್ಮೆ ಆಸ್ತಿ ಗಳಿಸಿರುವುದೇ ಅದಕ್ಕೆ ದಾಖಲೆ ಎಂದು ನುಡಿಯುತ್ತೇನೆ. ಕಟ್ಟಿ ಕಲ್ಲಪ್ಪರವರು ನನ್ನ ಗಂಡ. ಈಗ ತೋರಿಸುತ್ತಿರುವ ನಿಪಿ.10 ರಲ್ಲಿ ನನ್ನ ಗಂಡ ಕಟ್ಟಿ ಬಸಪ್ಪರವರ ಹೆಸರು ಸಹಮಾಲೀಕರಾಗಿ ಇದೆ ಎಂದರೆ ನನ್ನ ಗಂಡನ ಹೆಸರು ಆರ್ ಟಿ ಸಿ ಯಲ್ಲಿ ಇರುವುದು ನಿಜ ಅದರೆ ಸಾಲ ಪಡೆದುಕೊಳ್ಳುವ ಮೊದಲು ಬಸಪ್ಪರವರು ನಮಗೆ ತಿಳಿಸಿಲ್ಲ ಹಾಗೂ ನನ್ನ ಗಂಡನಿಗೆ ಆ ರೀತಿ ಸಾಲದ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಸದರಿ ಉತಾರಿನಲ್ಲಿ ಸಾಲದ ಬಗ್ಗೆ ನಮೂದು ಇದೆ ಎಂದರೆ ಅದು ಸುಳ್ಳು ನಮೂದು ಎಂದು

ನುಡಿಯುತ್ತೇನೆ. ನನ್ನ ಗಂಡ ಜೀವಂತವಿದ್ದಾಗ ಆ ರೀತಿ ಸಾಲ ಪಡೆದುಕೊಂಡಿರುವುದರ ವಿರುದ್ಧ ಯಾವುದಾದರೂ ಕಾನೂನು ಕ್ರಮಜರುಗಿಸಿದ್ದಾರೆಯೇ ಎಂದು ಕೇಳಿದರೆ ಅವರು ಶಾಲೆ ಕಲಿತಿಲ್ಲ ಹಾಗೂ ಆ ರೀತಿ ತಕರಾರು ಮಾಡುವಷ್ಟು ಜ್ಞಾನ ಇರಲಿಲ್ಲ ಎಂದು ನುಡಿಯುತ್ತೇನೆ. ನನ್ನ ಗಂಡ ತೀರಿಕೊಂಡ ನಂತರ ನನ್ನ ಗಂಡನಿಗೆ ಗೊತ್ತಿಲ್ಲದಂತೆ ಸಾಲ ಪಡೆದುಕೊಳ್ಳಲಾಗಿದೆ ಎಂದು ಕ್ರಿಮಿನಲ್ ಕೇಸ್ ಮಾಡಿದ್ದೇನೆಯೇ ಎಂದು ಕೇಳಿದರೆ ವಾಟ್ನಿ ದಾವೆ ಮಾತ್ರ ಸಲ್ಲಿಸಿರುವುದು ಎಂದು ನುಡಿಯುತ್ತೇನೆ. ಸದರಿ ಉತಾರಿನಲ್ಲಿ ಇರತಕ್ಕಂತಹ ಸಾಲವನ್ನು ತಿರುವಳಿ ಮಾಡಿದರೆ ಸದರಿ ಎಂಟ್ರಿಯನ್ನು ಉತಾರಿನಿಂದ ಕಡಿಮೆ ಮಾಡಲಾಗುತ್ತದೆ ಎಂದರೆ ಬೇಕಂತಲೇ ಆ ರೀತಿ ಎಂಟ್ರಿ ಮಾಡಿಸಿದ್ದಾರೆ ಎಂದು ನುಡಿಯುತ್ತೇನೆ. ಆ ರೀತಿ ಎಂಟ್ರಿಯನ್ನು ತೆಗೆದುಹಾಕಿಸಿಬೇಕೆಂದು ನಾನು ಪರಿಹಾರವನ್ನು ಕೇಳಿದ್ದೇನೆಯೇ ಎಂದರೆ ಹೌದು ಎಂದು ನುಡಿಯುತ್ತೇನೆ. ಸದರಿ ನಾನು ಹಾಜರಪಡಿಸಿರುವ ಆರ್ ಟಿ ಸಿ ಗಳಲ್ಲಿರುವ ಯಾವುದೇ ಸಾಲಗಳ ಬಗ್ಗೆ ದಾವಾ ಪತ್ರದಲ್ಲಿ ನಾನು ನಮೂದಿಸಿಲ್ಲ ಎಂದರೆ ಬಂದ ಉತ್ಪನ್ನಗಳನ್ನೇ ಬ್ಯಾಂಕಿನಲ್ಲಿ ಇಡುತ್ತ ಬಂದಿದ್ದರಿಂದ ಸಾಲ ಪಡೆದುಕೊಳ್ಳುವ ಅವಶ್ಯಕತೆಯೇ ಇರಲಿಲ್ಲ ಎಂದು ಮಾತ್ರ ನುಡಿಯುತ್ತೇನೆ. ಆ ರೀತಿ ಬ್ಯಾಂಕಿನ ದಾಖಲೆಗಳನ್ನು ಹಾಜರಪಡಿಸಿದ್ದೇನೆಯೇ ಎಂದು ಕೇಳಿದರೆ ದಾಖಲೆ ಬಸಪ್ಪರವರ ಬಳಿಯೇ ಇದೆ ಹಾಗೂ ನನ್ನ ಕಡೆ ಇಲ್ಲ, ಬ್ಯಾಂಕಿನಲ್ಲಿ ಹಣವನ್ನು ಇಟ್ಟವರು ಅವರೇ ತೆಗೆದುಕೊಳ್ಳುವವರು ಅವರೇ ಎಂದು ನುಡಿಯುತ್ತೇನೆ. ಆ ದಾಖಲೆಗಳನ್ನು ಹಾಜರಪಡಿಸಬೇಕೆಂದು ಬಸಪ್ಪರವರಿಗೆ ನೋಟಿಸ್ ಕೊಟ್ಟಿದ್ದೇನೆಯೇ ಎಂದರೆ ಆ ರೀತಿ ಮನೆಯಲ್ಲಿ ಜವಾಬ್ದಾರಿ ಅವರದೇ ಇರುವುದರಿಂದ ಅವರಿಗೆ ನೋಟಿಸ ಕೊಟ್ಟು ನಾನು ಮಾಡುವುದು ಏನಿದೆ ಎಂದು ನುಡಿಯುತ್ತೇನೆ. ಆ ರೀತಿ ಎಲ್ಲವನ್ನು ಬಸಪ್ಪರವರೇ ಮಾಡುತ್ತಿದ್ದರು ಎಂದು ದಾವಾ ಪತ್ರದಲ್ಲಿ ನಾನು ನಮೂದಿಸಿಲ್ಲ ಎಂದರೆ ವಾಟ್ನಿ ದಾವೆ ಹಾಕಿದ ನಂತರವೇ ಈ ಎಲ್ಲ ವಿಚಾರಗಳು ನನಗೆ ಗೊತ್ತಾಗಿರುವುದು ಎಂದು ನುಡಿಯುತ್ತೇನೆ. ಆ ರೀತಿ ಗೊತ್ತಾದ ನಂತರ ದಾವಾಪತ್ರವನ್ನು ತಿದ್ದುಪಡಿ ಮಾಡುವುದು ಅಥವಾ ಹೆಚ್ಚುವರಿ ಸಾಕ್ಷಿ ಹೇಳಿಕೆ ಪ್ರಮಾಣಪತ್ರ ಹಾಜರಪಡಿಸುವುದು ಮುಂತಾದ್ದು ಮಾಡಿದ್ದೇನೆಯೇ ಎಂದು ಕೇಳಿದರೆ ನವಗೆ ವಿಚಾರ ಗೊತ್ತಾಗಿದ್ದರೂ ಕೂಡ ನಾವು ಕೇಳಿದರೆ

ಅವರು ಕೊಡುವುದಿಲ್ಲವಲ್ಲ ಎಂದು ನುಡಿಯುತ್ತೇನೆ. ಆ ರೀತಿ ದಾವಾ ಪತ್ರದಲ್ಲಿ ನಾನು ತಿದ್ದುಪಡಿ ಮಾಡಿಲ್ಲ ಎಂದರೆ ಆಸ್ತಿ ಕೇಳಿದಾಗಲೇ ಹೊಡಿಬಡಿ ಮಾಡಿದ್ದಾರೆ ಹಾಗೂ ಇನ್ನೂ ದಾಖಲೆಗಳನ್ನು ಕೇಳಿದರೆ ಕೊಡುವುದಿಲ್ಲವಲ್ಲ ಎಂದು ನುಡಿಯುತ್ತೇನೆ. ಸದರಿ ವಿಚಾರಗಳನ್ನೇ ದಾವೆ ದಾಖಲಿಸುವ ಸಮಯ ನನ್ನ ವಕೀಲರಿಗೆ ನಾನು ತಿಳಿಸಿದ್ದೇನೆಯೇ ಎಂದರೆ ಕಾಗದಪತ್ರಗಳನ್ನು ಕೊಟ್ಟಿದ್ದೆ ಎಂದು ಮಾತ್ರ ನುಡಿಯುತ್ತೇನೆ. ದಾವಾ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯೇ ಎಂದು ಕೇಳಿದರೆ ಕಾಗದಪತ್ರ ತೆಗೆಸಿದಾಗ ವಿಚಾರಗಳು ಗೊತ್ತಾಗಿದ್ದು ಅದರ ಬಗ್ಗೆ ಬರೆಸಿದ್ದೇನೆ ಎಂದು ನುಡಿಯುತ್ತೇನೆ. ಅದರ ಸಾಲದ ಬಗ್ಗೆ ಬರೆಸಿಲ್ಲ ಎಂದರೆ ಸಾಲದ ಬಗ್ಗೆ ನನಗೆ ಗೊತಿತಲ್ಲ ಎಂದು ನುಡಿಯುತ್ತೇನೆ. ಉತಾರಿನಲ್ಲಿರುವ ಸಾಲದ ಬಗ್ಗೆ ಕೇಳುತ್ತಿರುವುದು ಎಂದರೆ ಅದು ಸುಳ್ಳು ನಮೂದು ಎಂದು ನುಡಿಯುತ್ತೇನೆ.

(ಮುಂದುವರೆದ ಪಾಟಿ ಸವಾಲಿಗೆ ಶ್ರೀ ಎಂ ಎಸ್ ಬಿ ವಕೀಲರು ಕಾಲಾವಕಾಶ ಕೋರಿದ್ದು ಸಾಕ್ಷಿಯು ನೇರವಾಗಿ ಉತ್ತರನ್ನು ಕೊಡದೇ ಹಾರಿಕೆ ಉತ್ತರಗಳನ್ನು ನೀಡುತ್ತಿದ್ದಾರೆ ಹಾಗೂ ಈ ಬಗ್ಗೆ ವಾದ ಮಂಡನೆ ಮಾಡಿದ ನಂತರ ಮುಂದುವರೆದ ಪಾಟಿಸವಾಲನ್ನು ಮಾಡುವುದಾಗಿ ಕಾಲಾವಕಾಶ ಕೋರಿರುತ್ತಾರೆ. ಆ ಕಾರಣದಿಂದ ಪಾಟಿಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.